# ಭಕ್ತರ ನಿಂದಾಸ್ತುತಿ ಭಗವಂತನಿಗೆ ಬಲು ಪ್ರೀತಿ !

**ಶಶಿಕಲಾ ಶ್ರೀಧರ್**

ಭಕ್ತಿಮಾರ್ಗದಲ್ಲಿ ಭಕ್ತನಿಗೂ ಭಗವಂತನಿಗೂ ಇರುವ ಸಂಬಂಧ ಅತಿ ಉತ್ಕಟವಾದುದು. ಹತ್ತುಹಲವು ವಿಧಗಳಿಂದ ಭಗವಂತನನ್ನು ಸ್ತುತಿಸುತ್ತ, ಪೂಜೆ-ಅರ್ಚನೆ, ಗಾಯನ, ನರ್ತನ, ಸೇವೆ, ಭಕ್ತಿ-ಭಾವಗಳಿಂದ ಭಗವಂತನ ಕೃಪೆಗೆ ಪಾತ್ರನಾಗುವ ತವಕ ಭಕ್ತನದು. ಇದರಲ್ಲಿ ಭಗವಂತನ ಪರೀಕ್ಷೆ, ಅವನ ಅಗಲಿಕೆ, ಬದುಕಿನ ಕಷ್ಟಕೋಟಲೆ ಇವುಗಳಿಂದ ನೊಂದು ಬೆಂದ ಭಕ್ತನು ಭಗವಂತನನ್ನು ನಿಂದಿಸುವ ಮೂಲಕವೂ ಸ್ತುತಿಮಾಡುತ್ತಾನೆ! ಈ ವಿಶಿಷ್ಟ ಬಗೆಯ ಭಾವವನ್ನಿಲ್ಲಿ ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.

''ನಿಜಭಕ್ತರು ನನ್ನನ್ನು ಸ್ತುತಿಸಿದರೂ ನನಗೆ ಪ್ರೀತಿ ; ನಿಂದಿಸಿದರಂತೂ ಅತ್ಯಂತ ಪ್ರೀತಿ'' ಎನ್ನುತ್ತಾನಂತೆ ಭಗವಂತ ! ಭಗವಂತನನ್ನು ನಿಂದಿಸುವ ಭಕ್ತರು ತಮ್ಮ ಮನದ ಅಸಮಾಧಾನ, ದುಃಖ, ನೋವು ಎಲ್ಲವನ್ನೂ ತಮ್ಮ ಇಷ್ಟದೈವಕ್ಕೇ ಒಪ್ಪಿಸುತ್ತಾರೆ. ಇಲ್ಲಿ ಭಕ್ತ-ಭಗವಂತ ಇವರ ಸಂಬಂಧ ಅತ್ಯಂತ ನಿಕಟ, ನಿಷ್ಕಲ್ಮಷ. ಅವನೊಡನೆ ಅತ್ಯಂತ ಸಲಿಗೆಯೂ ಆತ್ಮೀಯತೆಯೂ ಇರುತ್ತದೆ. ಇದರೊಡನೆ ತಮ್ಮ ಸ್ವಾತಂತ್ರ್ಯದ ಹಕ್ಕನ್ನೂ ಚಲಾಯಿಸುತ್ತಾರೆ. ರಾಮಕೃಷ್ಣ ಮಠದ ಹಿರಿಯ ಸಾಧುಗಳಾದ ಸ್ವಾಮಿ ಪ್ರಬುದ್ಧಾನಂದರು ಹೇಳುತ್ತಿದ್ದರು : ''ಭಗವಂತ ನಿನ್ನವ. ಅವನನ್ನು ಕೇವಲ ಪ್ರಾರ್ಥಿಸಿದರೆ ಸಾಲದು, ಅವನೊಡನೆ ಜಗಳವಾಡಿ ಬಿಡಬೇಕು. ನಾನು ನಿನಗಾಗಿ ಇಷ್ಟೊಂದನ್ನು ಮಾಡಿದರೂ ನೀನೇಕೆ ನನ್ನನ್ನು ಅನುಗ್ರಹಿಸುತ್ತಿಲ್ಲ? ಮುಂತಾಗಿ. ಇಂತಹ ನಿಂದಾಸ್ತುತಿಗಳು ನಾವು ದೇವರಿಗೆ ಅರ್ಪಿಸುವ ಬಿಸಿ ಬಿಸಿ ಪಾಯಸದಂತೆ. ಅದು ಅವನಿಗೆ ಅತ್ಯಂತ ಪ್ರಿಯವೂ, ರುಚಿಕರವೂ ಆಗಿರುತ್ತದೆ.'' ಎಂದು ಹೇಳುತ್ತಿದ್ದರು. ಇದು ಎಂತಹ ಸುಂದರವಾದ ಮಾತುಗಳು ! ಶ್ರೀರಾಮಕೃಷ್ಣರು, 'ಭಗವಂತ ಎಲ್ಲೋ ದೂರದಲ್ಲೋ, ಆಕಾಶದಲ್ಲೋ, ಮೃಣ್ಮಯ ವಿಗ್ರಹಗಳಲ್ಲೋ ಅಡಗಿ ಕುಳಿತಿಲ್ಲ; ನಮಗೆ ಅತ್ಯಂತ ಸಮೀಪದಲ್ಲೇ ಇದ್ದಾನೆ. ಪ್ರೇಮಭಕ್ತಿಯಿಂದ ನಂಬಿ ಕರೆದರೆ ಓ ಎನ್ನದೆ ಇರಲು ಅವನಿಂದ ಸಾಧ್ಯವಾಗದು' ಎನ್ನುತ್ತಾರೆ. ಎಲ್ಲಿ ಭಗವಂತನಲ್ಲಿ ಭಕ್ತರಿಗೆ ಹೆಚ್ಚು ಪ್ರೀತಿ ಇರುತ್ತದೆಯೋ ಅಲ್ಲಿ ಅವರಿಗೆ ಭಗವಂತನೊಡನೆ ಜಗಳವಾಡುವ ಅಧಿಕಾರವೂ ಇದೆ. ಇದು ಭಗವತ್ಪ್ರೀತಿಯ ಪರಾಕಾಷ್ಠೆ. ಭಗವದ್ಭಕ್ತರ ಇಂತಹ ಆಕ್ಷೇಪಣೆಗಳೇ ಅವರು ಭಗವಂತನಿಗೆ ಮಾಡುವ 'ನಿಂದಾಸ್ತುತಿ'.

ಭಗವಂತನ ಕರುಣೆ ಕೂಡಿಬರದೆ ಹೋದಾಗ ಕಾತರಿಸುವ ಭಕ್ತರು ಅವನೊಡನೆಯ ಸಲಿಗೆ ಪ್ರೇಮಗಳಿಂದ ಪರಮಾಪ್ತನಾದ ಅವನನ್ನು ಬೈಯುವ ಪರಿ ಬಲು ಚಂದ! ಸಂತ ತ್ಯಾಗರಾಜರು, ಪುರಂದರಾದಿ ದಾಸವರೇಣ್ಯರು, ತುಕಾರಾಮ್ ಮುಂತಾದ ಮರಾಠಿ ಸಂತರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಪರಮಾತ್ಮನನ್ನು ಬೈಯುತ್ತಾ ಸ್ತುತಿಗೈಯುತ್ತಾರೆ. ಭಗವಂತನೊಡನೆ ಅತಿಶಯವಾದ ಪ್ರೇಮಭಕ್ತಿ, ಅವನನ್ನು ಅಗಲಿರಲಾಗದ ಅವರ ಅಂತರಂಗದ ಅಳಲು ಅವರಿಂದ ಈರೀತಿ ಹಾಡಿಸುತ್ತದೆ. ಇವು ಭಕ್ತವತ್ಸಲ ಭಗವಂತನಿಗೆ ಅತ್ಯಂತ ಪ್ರಿಯವಂತೆ ! ಇವುಗಳಲ್ಲಿ ಕೆಲವನ್ನು ಅವಲೋಕಿಸಿದಾಗ ನಮಗೂ ಭಗವಂತನ ಮೇಲೆ ಸಿಟ್ಟು ಬರುತ್ತದೆ. ಅವರೊಡನೆ ನಾವೂ ದನಿಗೂಡಿಸೋಣವೆನಿಸುತ್ತದೆ.



ಇಲ್ಲಿ ಕೇಳಿ. ಮಹಾರಾಷ್ಟ್ರದ ಸಂತ ತುಕಾರಾಮರು ತಮ್ಮ ''ಜರಿ ಮೀ ನವ್ಹತೋ ಪತಿತ, ತರಿ ತೂ ಪಾವನ ಕೈಂಚಾ ಯೇಥ'' ಎಂಬ ಸುಂದರ ಅಭಂಗದಲ್ಲಿ, ''ಹೇ ವಿಠ್ಠಲಾ, ನಿನಗೆ ಪತಿತ ಪಾವನ ಎಂಬ ಹೆಸರಿದೆ. ಆದರೆ ಆ ಇಡೀ ಹೆಸರು ನಿನ್ನದೇನು ?

ಅಲ್ಲ. ಪತಿತ ಎಂದರೆ ನಾನು ಪಾವನ ಎಂದರೆ ನೀನು. ಮೊದಲು ನನ್ನ ಹೆಸರು ಆಮೇಲೆ ನಿನ್ನ ಹೆಸರು. ಪರುಷ ಶಿಲೆ ಕಬ್ಬಿಣವನ್ನು ಚಿನ್ನವಾಗಿಸುತ್ತದೆ ಎಂಬ ಅದರ ಘನತೆಯನ್ನು ಎಲ್ಲರಿಗೂ ತಿಳಿಸ ಬೇಕಾದರೆ ಮೊದಲು ಕಬ್ಬಿಣ ಇರಬೇಕಷ್ಟೆ? ಕಬ್ಬಿಣವೇ(ಎಂದರೆ ನಾನು) ಇಲ್ಲದಿದ್ದರೆ ಪರುಷ ಶಿಲೆಯ ಬೆಲೆ ಹೇಗೆ ತಿಳಿದು ಬರುವುದು? ಯಾಚಕರೇ ಇಲ್ಲದಿದ್ದರೆ ಕಲ್ಪವೃಕ್ಷದ ಮಹಿಮೆ ತಿಳಿದುಬರುವುದಾದರೂ ಹೇಗೆ'' ಎಂದು ಭಕ್ತಿತುಂಬಿ ಹಾಡು ತ್ತಾರೆ.

ಪುರಂದರದಾಸರು, 'ಕೇಳೋ ಕೋಪಿಸಬೇಡ ಹೇಳಿದರೆ ಫಲ ವಿಲ್ಲ' ಎಂಬ ಸುಂದರ ಕೀರ್ತನೆಯಲ್ಲಿ,

**ತಲೆಹೊಡಕ ಹಿರಿಯಮಗ ಧರೆಗೆ ಪೂಜಿತನಲ್ಲ (ಬ್ರಹ್ಮ)**
**ಬಲು ಭಂಡ ನಿನ್ನಯ ಕಿರಿಯಮಗ (ಮನ್ಮಥ)**
**ಲಲನೆಯು ಲೋಭಿಗಳ ಮನೆ ನೆಲಸಿಹಳು (ಲಕ್ಷ್ಮೀ)**
**ಹೊಲೆಯಕುಲವರಿಯದವಳು ಸೊಸೆ (ಸರಸ್ವತಿ)**
**ಮಗಳ ಮಾರ್ಗವು ಡೊಂಕು (ಗಂಗೆ)**
**ಮೈದುನ ಗುರುದ್ರೋಹಿ (ಗುರುಪತ್ನಿಗೆ ದ್ರೋಹವೆಸಗಿದ ಚಂದ್ರ)**
**ಮೊಮ್ಮಗನು ಬಲು ಚಾಡಿಕೋರ (ಕಲಹಪ್ರಿಯ ನಾರದ)**
**ನಿನ್ನಲ್ಲಿ ನಿನ್ನ ಕುಟುಂಬದವರಲ್ಲಿ ಇಷ್ಟೊಂದು ದೋಷಗಳ**
**ನಿಟ್ಟುಕೊಂಡು ನಮ್ಮನ್ನು ನಿನ್ನ ದಾಸನಾಗಿಸಿಕೊ ಎಂದರೆ**
**ಅನುಮಾನಿಸುವೆಯಾ?**

— ಎಂದು ಮುನಿಸಿಕೊಳ್ಳುತ್ತಾರೆ ದಾಸವರೇಣ್ಯರು !

ಶ್ರೀ ಗೋಪಾಲದಾಸರು ತಮ್ಮ ಒಂದು ಉಗಾಭೋಗದಲ್ಲಿ,

**ನೀರೊಳಗೆ ನಿಂದು ಗಟಗುಟ್ಟಿ ನಾರುವಗೆ ಗಂಭೀರ**
**ಕಸ್ತೂರಿಗಂಧ ಲೇಪನದ ಮದವೋ**
**ಭಾರ ಬೆನ್ನಲಿ ಪೊತ್ತು ಕಾಲ್ಮುರಿದು ಮಲಗಿದವಗೆ**
**ಧೀರಶೇಷನಮೇಲೆ ಶಯನ ಮದವೋ...**

ಎಂಬುದಾಗಿ ಮುಂದುವರೆಸುತ್ತಾರೆ.

ದಶಾವತಾರಗಳಲ್ಲಿ ಪರಮಾತ್ಮನು ನಾನಾರೀತಿ ಬವಣೆ ಪಟ್ಟ. ಈಗ ಶ್ರೀಮಂತ ದೇವರಾಗಿ ಮೆರೆಯುವ ಶ್ರೀನಿವಾಸನಿಗೆ ಮದ ಬಂದಿದೆ ಎಂದು ಅಣಕಿಸುತ್ತಾ, ''ಹೇ ದೇವ, ಈ ನಿನ್ನ ವೈಭವ ವೆಲ್ಲ ಮೂರುದಿನದ ಅರಸುತನ. ನಿನ್ನ ಭಕ್ತರನ್ನು ಸಲಹಲು ಮತ್ತೆ ನೀನು ಏನೇನು ಅವತಾರಗಳನ್ನು ಎತ್ತಬೇಕಾಗುವುದೋ ಯಾರಿಗೆ ಗೊತ್ತು?'' ಎಂದು ಪ್ರಶ್ನಿಸುತ್ತಾರೆ!

ಶ್ರೀ ವಾದಿರಾಜಸ್ವಾಮಿಗಳಾದರೋ,

**ಎನಗೆ ನಿನ್ನಲ್ಲಿ ಭಕ್ತಿ ಇರಲಿ ಇಲ್ಲದಿರಲಿ**
**ಜನ ಹರಿಭಕ್ತನೆಂದೆನ್ನ ಕರೆಯಲಾಗಿ**
**ಮನ ಪಾಪಕೆರಗದಂತೆ**
**ಅನುದಿನ ನೀನೆನ್ನ ಕಾಯಬೇಕಾಯಿತು**
**ಅನಿಮಿತ್ತ ಸುಜನಬಂಧು**
**ಕನವರಿಸಿ ಯಮಭಟರು**
**ಮುಂದೆ ಕೊಂದವರಾಗಿ**
**ಘನತೆಗೆ ಸಾಲದಯ್ಯ**
**ತನ್ನವರ ಹಯವದನ ಅನ್ಯರಿಗೊಪ್ಪಿಸಿದ**
**ನೆನ್ನುವ ದುರ್ವಾರ್ತೆ ತಪ್ಪಿಸಿಕೊ**

ಎಂಬ ಕೀರ್ತನೆಯಲ್ಲಿ ಹಯವದನ ತನ್ನವರನ್ನು ತಾನು ಕಾಪಾಡದೆ ಅನ್ಯರಿಗೆ (ಯಮಭಟರಿಗೆ) ಒಪ್ಪಿಸಿದ ಎಂಬ ದುರ್ವಾರ್ತೆ ತಟ್ಟದಂತೆ ತಪ್ಪಿಸಿಕೊ ಎಂದು ಎಚ್ಚರಿಸುತ್ತಾರೆ!

ಪುರಂದರದಾಸರು ಒಮ್ಮೆ ಪರಮಾತ್ಮನೊಡನೆ ಹೀಗೆ ಸಂಭಾ ಷಣೆ ನಡೆಸಿದರಂತೆ :

**ದೃಢಭಕ್ತಿ ನಿನ್ನಲ್ಲಿ ಬೇಡಿ ನಾ-**
**ನಡಿಗೆರಗುವೆನಯ್ಯ ಅನುದಿನ ಪಾಡಿ**
**ಕಡೆಗಣ್ಣಲೇಕೆನ್ನ ನೋಡಿ ಬಿಡುವೆ**
**ಕೊಡು ನಿನ್ನ ಧ್ಯಾನವ ಮನಶುಚಿ ಮಾಡಿ**

ಎಂದಾಗ ಶ್ರೀಹರಿಯು, ''ಹೇ ದಾಸಯ್ಯ, ನೀನು ಏನೂ ಸಾಧನೆಮಾಡದೆ ಸುಮ್ಮನೆ ಬೇಡುತ್ತಿರುವೆಯಲ್ಲ! ದುರ್ಬುದ್ಧಿ ಬಿಡಿಸು, ಕರುಣಕವಚ ತೊಡಿಸು, ಮನವನ್ನು ಶುಚಿಮಾಡು ಹೀಗೆಲ್ಲ ನೀನು ನನಗೆ ಆಜ್ಞೆ ಮಾಡುವೆಯಲ್ಲ ಇದರಲ್ಲಿ ನಿನ್ನ ಪಾತ್ರವೇನು?'' ಎಂದು ಕೇಳಿದಾಗ ದಾಸರು, ''ಹೇ ಸ್ವಾಮಿ, ನಾನು ಸುಮ್ಮನೆ ಬಂದು ಬೇಡುತ್ತಿಲ್ಲ. ಶರಣಾಗತರಕ್ಷಕನೆಂಬ ಬಿರುದನ್ನು ಸಂಪಾದನೆ ಮಾಡಿರುವೆಯಲ್ಲ! ನೀನು ಹಿಂದೆ ನನ್ನಂತೆ ಶರಣು ಬಂದ ಅನೇಕರನ್ನು ಸಲಹಿದ್ದುಂಟು, ಅವರೇನೂ ಅಂಥ ಪುಣ್ಯಮಾಡಿದವರಲ್ಲ, ಅವರ ಪಾಪಗಳನ್ನು ಕ್ಷಮಿಸಿ ಪೊರೆ ದಂತೆ ನನ್ನನ್ನೂ ಪೊರೆಯೋ ಪುರಂದರವಿಠ್ಠಲಾ'' ಎಂದರಂತೆ !

ಇದನ್ನೇ ತಮ್ಮ ಮತ್ತೊಂದು ಉಗಾಭೋಗದಲ್ಲಿ,

**ಆನೆಯನು ಕಾಯಿದಾಗ ಜ್ಞಾನವಿದ್ದಿದ್ದೇನು**
**ನಾನು ಒದರಲು ಈಗ ಕೇಳದಿದ್ದದ್ದೇನು**
**ದಾನವಾಂತಕ ದೀನರಕ್ಷಕನೆಂಬೊ**
**ಮಾನ ಉಳಿಸಿಕೊಳ್ಳೋ ಶ್ರೀ ಪುರಂದರವಿಠ್ಠಲ**

ಎಂದು ಭಗವಂತನನ್ನೇ ಎಚ್ಚರಿಸುತ್ತಾರೆ ಪುರಂದರದಾಸರು.

ದಾಸರು ತಮ್ಮ ಒಂದು ಸುಳಾದಿಯಲ್ಲಿ, ''ಉತ್ತಮವಾದ ಹಾಲನ್ನು ಕರೆದು ತಂದು ಕೋಣೆಯಲ್ಲಿಟ್ಟು ಬೆಕ್ಕನ್ನು ಕರೆದು 'ಇದನ್ನು ನೋಡಿಕೋ ನಾನು ಪೇಟೆಗೆ ಹೋಗಿಬರುತ್ತೇನೆ' ಎಂದು ಹೋದರೆ, ಎದುರಿಗೆ ತನಗೆ ಅತ್ಯಂತ ಪ್ರಿಯವಾದ ಹಾಲನ್ನು ಕಂಡು ಬೆಕ್ಕು ಸುಮ್ಮನಿದ್ದೀತೆ? ತಪ್ಪು ಯಾರದು? ಬೆಕ್ಕಿಗೆ ಯಜಮಾನಿಕೆ ಕೊಟ್ಟು ಅದರ ಮುಂದೆ ಹಾಲಿಟ್ಟ ಯಜ

ಮಾನನದು! ರೈತನು ಧಾನ್ಯವನ್ನು ಅಂಗಳದಲ್ಲಿ ರಾಶಿಹಾಕಿ ಕೋಳಿಗಳನ್ನು ಕರೆದು ನಾನು ಎಂಟು ದಿನ ಊರಿನಲ್ಲಿರುವುದಿಲ್ಲ, ನೀವು ಈ ಧಾನ್ಯಗಳನ್ನು ನೋಡಿಕೊಳ್ಳಿ ಎಂದು ಹೇಳಿ ಹೋದರೆ ಧಾನ್ಯ ಪ್ರಿಯರಾದ ಕೋಳಿಗಳು ಯಜಮಾನ ಊರಿಗೆ ಬರುವವರೆಗೂ ಸುಮ್ಮನಿದ್ದಾವೆಯೆ? ಇಲ್ಲಿ ತಪ್ಪು ಯಾರದು?'' ಎಂದು ಕೇಳುತ್ತಾರೆ.

ಇದನ್ನೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ 'ವಿಷಯವೆಂಬ ಹಸಿರನ್ನು ಇಂದ್ರಿಯಗಳೆಂಬ ಪಶುವಿನ ಮುಂದೆ ಇಟ್ಟು ಅದನ್ನು ಮೇಯಬೇಡ ಎಂದು ಹೇಳಿದರೆ ಪಶುವೇನ ಬಲ್ಲುದು, ಹಸಿರೆಂದೆಣಿಸಿ ಅದನ್ನು ಮೇಯುವುದು. ತಪ್ಪು ಯಾರದು?' ಎಂದು ಶಿವನನ್ನು ಪ್ರಶ್ನಿಸುತ್ತಾರೆ.

ಪುರಂದರದಾಸರು ''ಯಾಕೆ ನಿರ್ದಯನಾದೆಯೋ ಹರಿಯೇ'' ಎಂದು ಹಾಡುತ್ತಾ, 'ಆತುರದಿಂದ ಬಂದು ಕರಿರಾಜನನ್ನು ಪೊರೆದೆಯಲ್ಲಾ ಅವನು ನಿನಗೆ ಏನು ಕೊಟ್ಟನೊ?' ಎಂದು ಕೇಳುತ್ತಾರೆ. 'ಕಂಗೆಟ್ಟು ಕಂಬದಲಿ ನರಹರಿರೂಪದಲ್ಲಿ ಬಂದು ಪ್ರಹ್ಲಾದನನ್ನು ಅಪ್ಪಿಕೊಂಡು ಸಲಹಿದೆಯಲ್ಲಾ ಅವನು ಎಷ್ಟು ಬಂಗಾರಕೊಟ್ಟನೊ?' ಎಂದು ಕೇಳುತ್ತಾರೆ. ಪುನಃ ''ಅಜಾಮಿಳನು ಅಣ್ಣನೋ, ವಿಭೀಷಣನು ತಮ್ಮನೋ, ರುಕ್ಮಾಂಗದ ಮೊಮ್ಮಗನೇನೊ? ಅವರೆಲ್ಲಾ ನಿನಗೆ ಹಿತರು ನಾನು ಮಾತ್ರ ಅನ್ಯನೇನು? ಇದು ನ್ಯಾಯವೆ?'' ಎಂದು ಪ್ರಶ್ನಿಸುತ್ತಾರೆ.

ದಾಸರು ಮತ್ತೊಂದು ಕೀರ್ತನೆಯಲ್ಲಿ 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ, ತೋರು ಈ ಜಗದೊಳಗೆ ಒಬ್ಬರನೂ ಕಾಣೆ' ಎಂದು ಹಾಡುತ್ತಾ,

**ತಿರಿದುಂಬ ದಾಸರ ಕೈಲಿ ಕಪ್ಪವ ಕೊಂಬೆ**
**ದೊರೆ ನಿನ್ನ ನಂಬಿದರೆ ತಿರುಪೆಯೂ**
**ಹುಟ್ಟಲೊಲ್ಲದು ಕೇಳೋ**

ಎಂದು ಹೃದಯತುಂಬಿ ಹರಿಯನ್ನು ಹಂಗಿಸುತ್ತಾರೆ!

ಭದ್ರಾಚಲ ರಾಮದಾಸರು ದೇವಾಲಯದ ಧನವನ್ನು ದುರ್ವಿನಿಯೋಗ ಮಾಡಿದರೆಂಬ ಅಪವಾದಕ್ಕೆ ಗುರಿಯಾಗಿ ಸೆರೆಮನೆವಾಸವನ್ನು ಅನುಭವಿಸಬೇಕಾಗಿ ಬಂದಾಗ, 'ಇಕ್ಷ್ವಾಕು ಕುಲ ತಿಲಕ ಇಕನ್ಯೆನ ಪಲುಕವೇ ರಾಮಚಂದ್ರ' ಎಂದು ಹಾಡುತ್ತಾ, ನಿರಪರಾಧಿಯಾದ ನನ್ನನ್ನು ರಕ್ಷಿಸುವವರು ಯಾರೂ ಇಲ್ಲವೆ? ಲಕ್ಷ್ಮಣ ಭರತ ಶತ್ರುಘ್ನರಿಗೂ, ಸೀತೆಗೂ ಮಾಡಿಸಿದ ಬಂಗಾರದ ಒಡವೆಗಳಿಗೂ, ಮುತ್ತಿನಹಾರಗಳಿಗೂ ಆದ ವೆಚ್ಚವನ್ನು ಒಪ್ಪಿಸುತ್ತಾ, ಸ್ವಯಂ ಶ್ರೀರಾಮನಿಗೆ ತೊಡಿಸಿದ ತುರಾಯಿಪಟ್ಟೆ ಪೀತಾಂಬರ ಮುತ್ತಿನ ಹಾರಕುಂಡಲಗಳ ಖರ್ಚಿನ ಲೆಕ್ಕವನ್ನು ಒಪ್ಪಿಸುತ್ತಾ, 'ಇವುಗಳನ್ನೆಲ್ಲಾ ಧರಿಸಿ ಮೆರೆದೆಯಲ್ಲಾ ಅದು ಯಾರ ಸೊತ್ತು ಎಂದುಕೊಂಡೆ? ನಿನ್ನ ತಂದೆ ದಶರಥ ಮಹಾರಾಜನು ಹಾಕಿದ ಒಡವೆ ವಸ್ತ್ರಗಳೇನು? ಅಥವಾ ನಿನ್ನ ಮಾವ ಆ ಜನಕ ಮಹಾರಾಜನು ಕಳಿಸಿಕೊಟ್ಟನೇನು?' ಎಂದು ರಾಮನನ್ನು ನಿಂದಿಸುತ್ತಾ ಸ್ತುತಿಗೈಯುತ್ತಾರೆ.

ಇನ್ನು ಗಾನಯೋಗಿ ತ್ಯಾಗರಾಜರ ಅನೇಕ ನಿಂದಾಸ್ತುತಿಗಳು ಜನಪ್ರಿಯವಾಗಿವೆ. ತಮ್ಮ 'ಅಟುಕಾರಾದನಿ ಬಲ್ಕ ಅಭಿಮಾನಮು ಲೇಕ ಪೋಯೆನಾ?' ಎಂಬ ಕೀರ್ತನೆಯಲ್ಲಿ, ''ನನ್ನ ಮೇಲೆ ನಿನಗೆ ಸ್ವಲ್ಪವೂ ಅಭಿಮಾನವಿಲ್ಲದೆ ಹೋಯಿತೆ? ನಾನು ಇದನ್ನು ಹೇಗೆ ಸಹಿಸಲಿ? ವೇದಶಾಸ್ತ್ರಗಳು ಸ್ಪಷ್ಟಪಡಿಸಿರುವ ಸನ್ಮಾರ್ಗದಲ್ಲೇ ನಾನು ನಡೆದುಬರುತ್ತಿದ್ದರೂ ದೋಷಾರೋಪಣೆಗೆ ಗುರಿಯಾದ ನನ್ನ ರಕ್ಷಣೆಗೆ ಬಂದು, ಅದಕ್ಕೆ ಕಾರಣ ಕರ್ತನಾದ ದೇವತೆಗೆ ಇದು ಕೂಡದು ಎಂದು ನೇರವಾಗಿ ಹೇಳಿ ತಡೆಯಲು ನಿನ್ನಿಂದ ಸಾಧ್ಯವಿಲ್ಲವೆ?'' ಎನ್ನುತ್ತಾರೆ.

ಅಟ್ಟ ಬಲುಕುದು ಎಂಬ ತಮ್ಮ ಕೃತಿಯಲ್ಲಿ ತ್ಯಾಗರಾಜರು, ''ಶ್ರೀರಾಮಾ, ನೀನು ಒಮ್ಮೆ ಹೀಗೆ ಒಮ್ಮೆ ಹಾಗೆ ಮಾತನಾಡುತ್ತೀಯೇ, ಇಂಥ ಪರಿಸ್ಥಿತಿಯಲ್ಲಿ ನಾನೇನು ಮಾಡಲಿ? ತೊಟ್ಟಿಲಲ್ಲಿರುವ ಮಗುವನ್ನು ಒಮ್ಮೆ ತೂಗುತ್ತೀಯೆ ಮತ್ತೆ ನಿನಗೆ ತೋಚಿದಂತೆ ಅದನ್ನು ಜಿಗುಟುತ್ತೀಯೆ? ಜೀವಿಗಳನ್ನು ಶಿಕ್ಷಿಸುವೆ, ಅಮರತ್ವವನ್ನು ನೀಡುವೆ. ಏಕೆ ಹೀಗೆ ಮಾಡುವೆ ?''ಎಂದು ಪ್ರಶ್ನಿಸುತ್ತಾರೆ.

ಚಾರುಕೇಶಿ ರಾಗದ 'ಆಡಮೋಡಿಗಲದೇ ರಾಮಯ್ಯಾ' ಎಂಬ ಕೀರ್ತನೆಯಲ್ಲಿ ತ್ಯಾಗರಾಜರು ''ರಾಮಾ, ನೀನೊಬ್ಬನೇ ನನಗೆ ಮಿತ್ರನೆಂದು ಭಕ್ತಿಯಿಂದ ನಿನ್ನ ಪಾದಗಳನ್ನು ಭದ್ರವಾಗಿ ಹಿಡಿದಿರುವ ನನ್ನೊಂದಿಗೆ ಮಾತನಾಡದೆ ಗೋಳಾಡಿಸುವೆಯಾ? ಶಿವನ ಅಂಶವಾದ ಹನುಮಂತನು ಮುಂದೆ ಬಂದು ನಮಸ್ಕರಿಸಿದಾಗ ಅವನನ್ನು ನೀನೇ ಮಾತನಾಡಿಸದೆ ಲಕ್ಷ್ಮಣನಿಗೆ ಮಾತನಾಡಲು ಹೇಳಿದೆ. ಇಷ್ಟು ಬಿಗುಮಾನವಿರುವ ನಿನಗೆ ನಾನಾವ ಲೆಕ್ಕ !'' ಎಂದು ಛೇಡಿಸುತ್ತಾರೆ. ಮತ್ತೊಮ್ಮೆ ''ನನಗೆ ಕರುಣೆ ತೋರಿದರೆ ನಿನ್ನ ಪೂರ್ವಜರ ಆಸ್ತಿಯನ್ನೇನೂ ನೀನು ಕಳೆದುಕೊಳ್ಳುವುದಿಲ್ಲ'' ಎಂದು ಭಕ್ತಿಯಿಂದ ಬೈಯುವ ಪರಿ ಬಲು ಚಂದ !

ದೇವಮನೋಹರಿ ರಾಗದ ಕುಲಬಿರುದನು ಎಂಬ ಕೀರ್ತನೆಯಲ್ಲಿ ತ್ಯಾಗರಾಜರು,''ಶರಣಾಗತರ ಸಂರಕ್ಷಣೆ ಎಂಬುದೇ ಸೂರ್ಯವಂಶಜರ ಕುಲಧರ್ಮ. ರಾಮಾ, ನಿನ್ನ ಈ ಕುಲಬಿರುದಿಗೆ ಭಂಗ ಬಾರದಂತೆ ಕಾಪಾಡಿಕೋ. ಪ್ರಪಂಚದ ಸರ್ವರಿಗೂ ನೀನೇ ಆಧಾರ. ನಿನಗೆ ಅರ್ಹವಲ್ಲದ ಕೆಲಸ ಮಾಡಬೇಡ. ಹಾಗಿದ್ದರೆ ಮಾತ್ರ ನಿತ್ಯ ಮಂಗಳವನ್ನು ಪಡೆಯುವೆ'' ಎನ್ನುತ್ತಾರೆ.

ತ್ಯಾಗರಾಜರು ತಮ್ಮ ಮತ್ತೊಂದು ಕೃತಿಯಲ್ಲಿ 'ಮಾ ಜಾನಕೀ ಚೆಟ್ಟ ಬಟ್ಟಗ' ಎಂದು ಹಾಡುತ್ತಾ ''ಓ ರಾಮಾ, ನೀನು ರಾವ

ಣಾರಿ ಎಂಬ ಬಿರುದು ಪಡೆದದ್ದು ನಮ್ಮ ಜಾನಕಿಯನ್ನು ವಿವಾಹವಾದುದರಿಂದ. ಲೋಕಮಾತೆ ಸೀತೆ ಮನಸ್ಸು ಮಾಡಿದ್ದರೆ ರಾವಣನನ್ನು ಕ್ಷಣಮಾತ್ರದಲ್ಲಿ ಭಸ್ಮ ಮಾಡಿಬಿಡಬಹುದಿತ್ತು. ಆದರೆ ಸೀತೆ ಅವನನ್ನು ಕೊಲ್ಲದೆ ಸಹನೆಯಿಂದ ಇದ್ದುದು ನೀನೇ ಶತ್ರುವನ್ನು ಕೊಂದು ರಾವಣಾರಿ ಎಂಬ ಕೀರ್ತಿಯನ್ನು ಪಡೆಯಲಿ ಎಂದು. ತಿಳಿಯಿತೆ?'' ಎಂದು ಪ್ರೇಮಭಕ್ತಿಯಿಂದ ಪರಮಾತ್ಮನನ್ನು ನಿಂದಿಸುತ್ತಾರೆ. ಮತ್ತೊಮ್ಮೆ 'ಮಾನಮು ಲೇದಾ' ಎಂದು ಹಮೀರ್ ಕಲ್ಯಾಣಿ ರಾಗದಲ್ಲಿ ಹಾಡುತ್ತಾ, ''ನಿನಗೆ ಮಾನವಿಲ್ಲವೆ? ತನ್ನವರೆಂಬ ಅಭಿಮಾನವಿಲ್ಲವೆ? ನಿನ್ನ ಮಕ್ಕಳಾದ ಕುಶಲವರ ಗಾನಕ್ಕೆ ಮರುಳಾದೆ. ಗಾನರುಚಿ ಇರುವ ನನಗೂ ನೀನು ತಂದೆಯಲ್ಲವೆ? ನಿನ್ನನ್ನು ಶಂಕಿಸಿದ ಸುಗ್ರೀವನಿಗೆ ರಾಜ್ಯಾಭಿಷೇಕ ಮಾಡಿದೆ. ನಾನು ಶಂಕಿಸದಿದ್ದರೂ, ರಾಜ್ಯವನ್ನು ಬಯಸದಿದ್ದರೂ ದಾಸನಾಗಿ ಬೇಡಿಕೊಳ್ಳುವ ನನ್ನ ಬಗ್ಗೆ ನಿರ್ಮೋಹವೇಕೆ? ಇದು ನ್ಯಾಯವಲ್ಲ'' ಎಂದು ಕೋಪದಿಂದ ತ್ಯಾಗರಾಜರು ತಮ್ಮ ಇಷ್ಟದೈವವನ್ನೇ ಪ್ರಶ್ನಿಸುತ್ತಾರೆ.

''ರಾಮಾ, ನನ್ನನ್ನು ರಕ್ಷಿಸಲು ನಿನಗೇಕೆ ಲೋಭಿತನ? ಗಜೇಂದ್ರನು ಮೊರೆಯಿಟ್ಟ ಕೂಡಲೇ ಆತನನ್ನು ರಕ್ಷಿಸಲು ಕೂಡಲೇ ಬರಲಿಲ್ಲವೆ? ಶರಣು ಬಂದ ಕಾಕಾಸುರನನ್ನೂ, ವಿಭೀಷಣನನ್ನೂ ಕಾಪಾಡಲಿಲ್ಲವೆ? ದ್ರೌಪದಿ 'ಕೃಷ್ಣಾ ನೀನೇ ಗತಿ' ಎಂದು ಮೊರೆಯಿಟ್ಟಾಗ ಕೂಡಲೇ ಓಡಿ ಹೋಗಿ ಅವಳನ್ನು ರಕ್ಷಿಸಲಿಲ್ಲವೆ? ಒಂದು ಗಿಡುಗನಿಗಾಗಿ ದೇಹವನ್ನೇ ಕೊಟ್ಟವನ ವಂಶದಲ್ಲಿ ನೀನು ಹುಟ್ಟಿರುವುದು. ಆ ಗುಣಗಳೆಲ್ಲಾ ನಿನ್ನನ್ನು ಬಿಟ್ಟುಹೋಗಿವೆಯೆ?'' ಎಂಬುದಾಗಿ ತ್ಯಾಗರಾಜರು 'ರಾಮಾ ಲೋಭಮೇಲ?' ಎಂಬುದಾಗಿ ರಾಮನನ್ನು ಸ್ತುತಿಸುತ್ತಾರೆ.

ಹುಸೇನಿ ರಾಗದ 'ರಾಮ ರಾಮ ರಾಮ ಸೀತಾರಮಣ' ಎಂಬ ಕೃತಿ ತ್ಯಾಗರಾಜರ ಒಂದು ರೋಷೋಕ್ತಿಯುಳ್ಳ ದಿವ್ಯ ನಾಮಕೀರ್ತನೆ. ಈ ಕೀರ್ತನೆಯಲ್ಲಿ ತಮ್ಮ ಮಾನಸಿಕ ದುಃಸ್ಥಿತಿಯನ್ನು ಶ್ರೀರಾಮನಲ್ಲಿ ತೋಡಿಕೊಂಡು ಅನನ್ಯ ಭಕ್ತಿಯಿಂದ ಅವನನ್ನು ತರಾಟೆಗೆ ತೆಗೆದುಕೊಳ್ಳುವ ಪರಿ ಬಲು ಸುಂದರ! '' ಓ ರಾಮ ! ಯಾವ ಮಿತ್ರನ ಮಾತನ್ನು ಕೇಳಿ ನನ್ನ ಬಳಿಗೆ ನೀನು ಬಾರದಿರುವೆ? ಇದು ಯಾರ ಬಲವಂತ? ನನ್ನನ್ನು ಕಷ್ಟದಲ್ಲಿ ಸಿಕ್ಕಿಸುವುದರಲ್ಲಿ ನಿನಗೆ ಸಂತೋಷವೆ? ನೀನಲ್ಲದೆ ನನಗೆ ಬೇರಾರೂ ರಕ್ಷಿಸುವವರಿಲ್ಲವೆಂಬ ಹೆಮ್ಮೆಯೆ? ನನ್ನನ್ನು ಹೀಗೆ ಪೀಡಿಸುವುದರಿಂದ ನಿನಗೆ ಯಶಸ್ಸು ದೊರಕುವುದೆ? ನನ್ನಿಂದ ಇದನ್ನು ಸಹಿಸಲು ಸಾಧ್ಯವೆ? ಕರುಣಿಸುತ್ತೇನೆ ಎಂದು ಭರವಸೆ ಕೊಡಲು ನಿನಗೆ ಮಾತಿನ ಕ್ಷಾಮವೆ? ಅಥವಾ ಭಾರವೆ? ಇಷ್ಟು ಬೇಡಿಕೊಳ್ಳುತ್ತಿದ್ದರೂ ಕಲ್ಲಿನಂತಿರುವೆ. ನಿನ್ನ ಹೃದಯ ಕಬ್ಬಿಣದಿಂದ ಮಾಡಲಾಗಿದೆಯೆ? ನನ್ನ ಈ ಸ್ಥಿತಿಯನ್ನು ನಿನಗೆ ತಿಳಿಸಲು ಯಾರೂ ಹಿರಿಯರಿಲ್ಲವೆ? ಅವರೂ ನಿನ್ನಂತೆಯೇ ಏನು? ಇವೆಲ್ಲಾ ನನ್ನ ಕರ್ಮಫಲವೋ ಇಲ್ಲಾ ನಿನ್ನ ಛಲವೋ? ತಮ್ಮ ಪ್ರಜೆಗಳನ್ನು ಕಾಪಾಡಲು ಅಶಕ್ತರಾದವರ ವಂಶದಲ್ಲಿ ಜನಿಸಿರುವೆಯಾ?'' ಎನ್ನುತ್ತಾರೆ.

ಕೊನೆಯದಾಗಿ ನಮ್ಮ ಪುರಂದರದಾಸರು ತಮ್ಮ ಒಂದು ಉಗಾಭೋಗದಲ್ಲಿ,

**ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ ।**
**ನಿನ್ನಂಥ ತಂದೆ ಎನಗುಂಟು ನಿನಗಿಲ್ಲ ।**
**ನೀನೇ ಪರದೇಶಿ ನಾನೇ ಸ್ವದೇಶಿ ।**
**ನಿನ್ನರಸಿ ಲಕುಮಿ ಎನ್ನ ತಾಯಿ**
**ನಿನ್ನ ತಾಯ ತೋರೋ ಪುರಂದರವಿಠಲ ॥**

— ಎಂದು ಭಗವಂತನಿಗೇ ಸವಾಲು ಹಾಕುತ್ತಾರೆ!

ಹೀಗೆ ಭಕ್ತರು ಭಕ್ತಿಭರಿತರಾಗಿ ಭಗವಂತನನ್ನು ಪರಿಪರಿಯಾಗಿ ಭಜಿಸುವುದನ್ನು ಕೇಳುವುದೇ ಆನಂದ. ಒಮ್ಮೆ ಅತ್ಯಂತ ಸಂತೋಷದಿಂದ ಹೊಗಳಿ ಹಾಡುತ್ತಾರೆ. ಅವನ ಸೌಂದರ್ಯವನ್ನು ಅಡಿಯಿಂದ ಮುಡಿವರೆಗೆ ವರ್ಣಿಸಿ ತೃಪ್ತಿಪಡುತ್ತಾರೆ. ಮತ್ತೊಮ್ಮೆ ಅವನು ಕರುಣೆ ತೋರದೆ ದರ್ಶನ ನೀಡದಿದ್ದಾಗ ಹೃದಯವಿದ್ರಾವಕ ದೈನ್ಯತೆಯಿಂದ ಕಣ್ಣೀರಿಡುತ್ತಾ ಪ್ರಾರ್ಥಿಸುತ್ತಾರೆ. ಕೆಲವೊಮ್ಮೆ ಹತಾಶರಾಗಿ ಭಗವಂತನ ಪತ್ನಿಯ ಮೂಲಕವೋ ಅಥವಾ ಇತರ ದೇವತೆಗಳ ಮೂಲಕವೋ ಅವನ ಕೃಪೆಗಾಗಿ ತನ್ನ ಬಗ್ಗೆ ಶಿಫಾರಸ್ಸು ಮಾಡಲು ಪ್ರಾರ್ಥಿಸುತ್ತಾರೆ. ಎಲ್ಲವೂ ನಿಷ್ಫಲವಾದಾಗ ದುಃಖ ಕೋಪಕ್ಕೆ ತಿರುಗಿ ತಮ್ಮ ಇಷ್ಟದೈವವನ್ನು ಇಷ್ಟಬಂದಂತೆ ನಿಂದಿಸುತ್ತಾ ರೋಷೋಕ್ತಿಗಳೊಡನೆ ನಿಂದಾಸ್ತುತಿಯ ಪ್ರಯೋಗ ಮಾಡುತ್ತಾರೆ. ಆ ಲೀಲಾಮಯ ದೇವನಿಗೆ ಇವೆಲ್ಲವೂ ಲೀಲೆಯೇ! ಭಕ್ತರು ಅವನನ್ನು ಹೊಗಳಿದರೂ ಪ್ರೀತಿ; ಬೈದು ಕೀರ್ತಿಸಿದರಂತೂ ಬಹು ಪ್ರೀತಿ ! ಭಕ್ತನಿಗೆ ಅತಿ ಸಮೀಪ ಬಂಧುವಾದ ಅವನಿಗೆ ಹೊಗಳುವ ಹಕ್ಕೂ ಇದೆ ; ಬೈದು ಟೀಕಿಸುವ ಹಕ್ಕೂ ಇದೆ. ಆತ್ಮೀಯರಿಬ್ಬರ ನಡುವೆ ನಡೆಯುವ ಈ ಪ್ರೇಮಭಕ್ತಿಯ ಕಲಹ ಅತಿ ಕುತೂಹಲಕಾರಿ, ಮನೋಹಾರಿ! ಮಹದಾನಂದಕಾರಿ !

**ಶಿಷ್ಯ :** ''ನಾನು ಹೆಚ್ಚು ಹಣವನ್ನು ಸಂಪಾದಿಸಲು ಯತ್ನಿಸಲೆ?''

**ಶ್ರೀರಾಮಕೃಷ್ಣರು:** ''ವಿವೇಕದಿಂದ ನೀನು ಅದನ್ನು ಸಂಸಾರದಲ್ಲಿ ಖರ್ಚು ಮಾಡಬೇಕೆಂದು ಬಯಸಿದರೆ ಪ್ರಯತ್ನಿಸು. ಆದರೆ ಜೋಪಾನವಾಗಿರು. ನ್ಯಾಯಮಾರ್ಗದಿಂದ ಮಾತ್ರ ಹಣ ಸಂಪಾದನೆ ಮಾಡಬೇಕು. ದೇವರ ಸೇವೆಯೇ ನಿನ್ನ ಗುರಿ; ಹಣ ಸಂಪಾದನೆಯಲ್ಲ. ದೇವರಿಗೋಸ್ಕರ ಅರ್ಪಿಸಿದ ಹಣದಲ್ಲಿ ದೋಷವಿಲ್ಲ.''

('ಶ್ರೀರಾಮಕೃಷ್ಣ ಉಪದೇಶಾಮೃತ', ಪು. ೭೪)